# ಮಲೇಶ್ಯಾ ಪಾಮೆಣ್ಣೆ ರಫ್ತು ಹೆಚ್ಚಳ

ಮಲೇಶ್ಯಾದಿಂದ ಎಪ್ರಿಲ್ 15ರ ವರೆಗೆ 5 ಲಕ್ಷ ಟನ್‌ಗಳಷ್ಟು ಪಾಮ್ ಎಣ್ಣೆ ರಫ್ತು ಮಾಡಲಾಗಿದೆ. ಹಿಂದಿನ ತಿಂಗಳ ಇದೇ ಅವಧಿಯಲ್ಲಿ 4.16 ಲಕ್ಷ ಟನ್ ಎಣ್ಣೆ ರಫ್ತಾಗಿದ್ದು, ಶೇ 20 ರಷ್ಟು ಹೆಚ್ಚಳ ಉಂಟಾಗಿದೆ ಎಂದು ಅಧಿಕೃತ ಮೂಲಗಳು ತಿಳಿಸಿವೆ.

# ಮಲೇಶ್ಯಾ ಪಾಮೆಣ್ಣೆ ಉತ್ಪಾದನೆ ಹೆಚ್ಚಳ ಧಾರಣೆ ಒತ್ತಡದಲ್ಲಿ

ಮಲೇಶ್ಯಾದಲ್ಲಿ ಪ್ರಸ್ತುತ ಪಾಮೆಣ್ಣೆ ಉತ್ಪಾದನೆ ಹೆಚ್ಚಾಗುವ ನಿರೀಕ್ಷೆಯಿದ್ದು, ಎಣ್ಣೆ ದರಗಳು ಮಂದಿಯಾಗಲು ಶುರುವಾಗಿದೆ ಎಂದು ವರದಿಯಾಗಿದೆ. ಇದೇ ಸಂದರ್ಭದಲ್ಲಿ ಎಣ್ಣೆ ರಫ್ತು ಬೇಡಿಕೆ ಕೂಡಾ ಕಡಿಮೆಯಾಗುತ್ತಿರುವುದರಿಂದ ಧಾರಣೆ ಮೇಲೆ ಒತ್ತಡ ಬೀಳಲಾರಂಭಿಸಿದೆ. ಪ್ರಸ್ತುತ ಅವಧಿಯಲ್ಲಿ ಸಾಮಾನ್ಯವಾಗಿ ಪಾಮೆಣ್ಣೆ ಧಾರಣೆ ಮಂದಿಯಾಗುವ ಸಂದರ್ಭ ಹೆಚ್ಚಾಗಿರುತ್ತದೆ. ಫ್ಯೂಚರ್ ವ್ಯವಹಾರದ ಮೇಲೂ ಪರಿಣಾಮವಾಗಿದ್ದು, ಜುಲಾಯ್ ಧಾರಣೆ ಮಂದಿಯಾಗುತ್ತಿದೆ. ಎಣ್ಣೆಗೆ ಜಾಗತಿಕ ಬೇಡಿಕೆ ಕಡಿಮೆಯಾಗುತ್ತಿರುವ ಗುಮಾನಿಯಿದ್ದು, ಈಗಿನ ಪರಿಸ್ಥಿತಿ ಸ್ವಲ್ಪ ಸಮಯ ಮುಂದುವರಿಯುವ ನಿರೀಕ್ಷೆಯಿದೆ ಎಂದು ಅಂದಾಜು ಮಾಡಲಾಗಿದೆ.